# 7ಸಿ - ಗುಣಾತ್ಮಕ ಶಿಕ್ಷಣಕ್ಕಾಗಿ ರಚನಾತ್ಮಕ ಚಟುವಟಿಕೆಗಳು
# (ಸಿಸಿಇ ಚಟುವಟಿಕೆಗಳ ನಿರ್ವಹಣೆಗಾಗಿ ಶಾಲಾ ವಿಶೇಷ ಫಲಿತಾಂಶಮುಖಿ ಕಾರ್ಯಕ್ರಮಗಳು)

## ಪ್ರೌಢಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ ಫಲಿತಾಂಶ ಮುಖಿ ಕಾರ್ಯತಂತ್ರಗಳು

## [ಎಸ್.ಎಸ್.ಎಲ್.ಸಿ ಫಲಿತಾಂಶ ಅಭಿವೃದ್ಧಿಗಾಗಿ ಸೃಜನಶೀಲ ಮತ್ತು ಆವಿಷ್ಕೃತ ಚಟುವಟಿಕೆಗಳು]

ಪ್ರಾಥಮಿಕ ಶಿಕ್ಷಣದ ಬುನಾದಿಯ ಮೇಲೆ ನಿರ್ಮಾಣವಾಗಿರುವ ಪ್ರೌಢಶಿಕ್ಷಣ ಕಲಿಕಾ ಪ್ರಕ್ರಿಯೆಯ ಗುಣಮಟ್ಟವು ತನ್ನದೇ ಆದ ಪ್ರಾದೇಶಿಕ ಮತ್ತು ಶಾಲಾವಾರು ಶೈಕ್ಷಣಿಕ ಹಿನ್ನೆಲೆ ಹೊಂದಿದ್ದು, ಅಲ್ಲಿನ ಸಾಧನೆ ಮತ್ತು ಕೊರತೆಗಳನ್ನಾಧರಿಸಿ ಅದರ ಗುಣಮಟ್ಟವನ್ನು ಉತ್ತಮಪಡಿಸಲು ಕಲಿಕಾ ಹೊಂದಾಣಿಕೆಯೊಂದಿಗೆ ನಿರ್ದಿಷ್ಟ ಕಾರ್ಯತಂತ್ರಗಳನ್ನು ರೂಪಿಸಬೇಕಾಗುತ್ತದೆ. ವಿವಿಧ ರಚನಾತ್ಮಕ ಕ್ರಿಯಾ ಯೋಜನೆಗಳನ್ನು ಅಳವಡಿಸಿರುವ ಪ್ರಯತ್ನಗಳು ವಿವಿಧ ಜಿಲ್ಲೆಗಳಲ್ಲಿ ಭಿನ್ನವಾಗಿವೆ. ಅಂತಹ ಕೆಲವು ಜಿಲ್ಲೆಗಳಲ್ಲಿ ರೂಪಿಸಿ ಉತ್ತಮ ಯಶಸ್ಸು ಕಂಡ ಕೆಲವು ಕ್ರಿಯಾಶೀಲ ಆವಿಷ್ಕೃತ [Innovative] ಕಾರ್ಯ ತಂತ್ರಗಳನ್ನು ಕೆಳಕಂಡಂತೆ ದಾಖಲಿಸಿದೆ. ಶಾಲಾ ಮುಖ್ಯಸ್ಥರು ತಮ್ಮ ಶಾಲಾ ವ್ಯಾಪ್ತಿಯಲ್ಲಿ ಸ್ಥಳೀಯ ಸಂಪನ್ಮೂಲಗಳನ್ನಾಧರಿಸಿ ಅನುಷ್ಠಾನಗೊಳಿಸಲು ತಿಳಿಸಿದೆ.

### ಶೈಕ್ಷಣಿಕ ಪೂರ್ವ ತಯಾರಿ:-

- ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಕಳೆದ ಸಾಲಿನ ಶೈಕ್ಷಣಿಕ ಪ್ರಗತಿ ವಿಶ್ಲೇಷಿಸಿ ಪ್ರಸಕ್ತ ಸಾಲಿಗೆ ಗುರಿ ಸಾಧನೆಗೆ ಸಹಾಯವಾಗುವಂತೆ ತರಗತಿವಾರು / ವಿಷಯವಾರು ಶೈಕ್ಷಣಿಕ ಯೋಜನೆ ತಯಾರಿಸುವುದು.
- ಸದರಿ ಕ್ರಿಯಾ ಯೋಜನೆಯಲ್ಲಿ ಮಾಹೆವಾರು ಸಂಘಟಿಸಬೇಕಾದ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಅಂದರೆ, ಪುಸ್ತಕ ಪರಿಚಯ ಅವಧಿಗಳು, ಕಲಿಕಾ ಚೇತರಿಕೆ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಆಧರಿಸಿ ಶ್ರೇಣೀಕರಣ, ಪರೀಕ್ಷೆಗಳು ಮತ್ತು ಮೌಲ್ಯಾಂಕನ, ಸಿ.ಸಿ.ಇ., ಚಟುವಟಿಕೆಗಳು ಇತ್ಯಾದಿಗಳನ್ನು ಒಳಗೊಂಡ ಸಾಧನೀಯ ಕ್ರಿಯಾ ಯೋಜನೆ ಅಳವಡಿಸುವುದು.
- ಶಾಲೆಯಲ್ಲಿ ಕಡ್ಡಾಯವಾಗಿ ವಿಷಯವಾರು ಬೋಧನೆಗೆ ಶಿಕ್ಷಕರನ್ನು ನಿಯುಕ್ತಿಗೊಳಿಸುವುದು, ಹುದ್ದೆ ಖಾಲಿ ಇದ್ದಲ್ಲಿ ಮೇಲಧಿಕಾರಿಗಳೊಂದಿಗೆ ಚರ್ಚಿಸಿ ಸರಿದೂಗಿಸಿಕೊಳ್ಳುವುದು.
- ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ನಿರ್ವಹಣೆಗಾಗಿ ಶಿಕ್ಷಕರಿಗೆ ಜವಾಬ್ದಾರಿ ನೀಡುವುದು.
- ಇಲಾಖೆ ನೀಡಿರುವ ಸೂಚನೆಗಳಂತೆ ನಿಗದಿಪಡಿಸಿದ ವಾರ್ಷಿಕ ಪಾಠ ಹಂಚಿಕೆಯಂತೆ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಮುಂದುವರೆಸುವುದು. ಕಾಲಕಾಲಕ್ಕೆ ಮೌಲ್ಯಾಂಕನ ವಿಶ್ಲೇಷಣೆ ಕೈಗೊಂಡು ಮುಂದುವರೆಯುವುದು.
- ಕಳೆದ ಸಾಲಿನ ಶೈಕ್ಷಣಿಕ ಪ್ರಗತಿಯನ್ನಾಧರಿಸಿ ಕಲಿಕಾ ಹಿನ್ನಡೆ ಸಾಧಿಸಿದ ಶಾಲೆಗಳನ್ನು ಉಸ್ತುವಾರಿ ಅಧಿಕಾರಿಗಳಿಗೆ ದತ್ತು ನೀಡುವುದರೊಂದಿಗೆ ಅನುಪಾಲನೆ ಮಾಡುವುದು.
- ವಿಷಯವಾರು ಕ್ಲಬ್‌ಗಳು ಆಯೋಜಿಸುವ (ವರ್ಷಕ್ಕೆ 4 ಬಾರಿ) ತರಬೇತಿ ಕಾರ್ಯಾಗಾರಗಳಿಗೆ ಸಂಬಂಧಿಸಿದ ಶಿಕ್ಷಕರನ್ನು ನಿಯೋಜಿಸಿ ಅನುಪಾಲನೆ ಮಾಡುವುದು.

- ಪ್ರೌಢ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಶಾಲೆಯ ಶೈಕ್ಷಣಿಕ ಪ್ರಗತಿಗೆ ಮಾನದಂಡವಾಗಿದ್ದು, ಉತ್ತಮ ಸಾಧನೆ ಆ ಶಾಲೆಯ ಪ್ರಶಂಸೆಗೆ ಪಾತ್ರವಾಗುವುದರಿಂದ ರಾಜ್ಯದ ಹಲವಾರು ಶಾಲೆಗಳಲ್ಲಿ ನಮ್ಮ ಶಿಕ್ಷಕರು ರಚನಾತ್ಮಕವಾಗಿ ಫಲಿತಾಂಶ ಸುಧಾರಣೆಗಾಗಿ ವಿಶೇಷ ಕಾರ್ಯತಂತ್ರಗಳನ್ನು ಆವಿಷ್ಕೃತ [Innovative]ವಾಗಿ ಚಿಂತಿಸಿ ಹಾರ್ಡ್‌ವರ್ಕ್ ಮಾಡುವುದಕ್ಕಿಂತ ಸ್ಮಾರ್ಟ್ ವರ್ಕ್‌ಗಳನ್ನು ರೂಪಿಸಿ ಯಶಸ್ವಿಯಾಗಿರುವುದನ್ನು ಮನಗಂಡು ಸಲಹಾತ್ಮಕವಾಗಿ ಅನುಷ್ಠಾನಗೊಳಿಸಲು ಕೆಳಕಂಡಂತೆ ದಾಖಲಿಸಲಾಗಿದೆ. ಇವುಗಳನ್ನು 8 ಮತ್ತು 9ನೇ ತರಗತಿಗಳಲ್ಲಿಯೂ ಸಹ ಅಳವಡಿಸುವುದರೊಂದಿಗೆ ಗುಣಮಟ್ಟದ ಶಿಕ್ಷಣ ಅನುಷ್ಠಾನಗೊಳಿಸಬಹುದಾಗಿದೆ.

1. **ವಿದ್ಯಾರ್ಥಿಗಳ ಶ್ರೇಣೀಕರಣ:-** ತರಗತಿಯ ಒಟ್ಟು ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಆಧರಿಸಿ ಆರು ಗುಂಪುಗಳನ್ನಾಗಿ ವಿಂಗಡಿಸುವುದು. ಪ್ರತಿ ಗುಂಪಿನಲ್ಲಿ ಎರಡು ಒಳಗುಂಪುಗಳು ಅಂದರೆ, ಸರಾಸರಿಗಿಂತ ಹೆಚ್ಚು ಮತ್ತು ಕಡಿಮೆ ಕಲಿಕಾ ಸಾಮರ್ಥ್ಯವನ್ನು ಹೊಂದಿರುವ ಸರಾಸರಿಗಿಂತ ಕಡಿಮೆ ವಿದ್ಯಾರ್ಥಿಗಳನ್ನು ಒಳಗೊಂಡಿರಬೇಕು. ಈ ಗುಂಪನ್ನು ಶೈಕ್ಷಣಿಕ ವರ್ಷದ ಪ್ರಾರಂಭದ ಮೊದಲನೆಯ ವಾರದಲ್ಲಿ ರಚಿಸಿಕೊಂಡು ವರ್ಷ ಪೂರ್ತಿ ಸಿ.ಸಿ.ಇ., ಚಟುವಟಿಕೆಗಳಿಗೆ ಸ್ಪರ್ಧಾತ್ಮಕವಾಗಿ ಬಳಸಿಕೊಳ್ಳುವುದು ಮತ್ತು ಆರೂ ವಿಷಯ ಶಿಕ್ಷಕರಿಗೆ ತಲಾ ಒಂದು ಗುಂಪನ್ನು ದತ್ತು ನೀಡಿ ಉಸ್ತುವಾರಿ ವಹಿಸುವುದು.
2. **ಆಪ್ತ ಸಮಾಲೋಚನೆ ಮತ್ತು ಮನೆ-ಮನೆ ಭೇಟಿ:-** ಪ್ರತಿ ವರ್ಷದಲ್ಲಿ ಎರಡು ಬಾರಿ ಅಂದರೆ, ಜುಲೈ ಮತ್ತು ಜನವರಿ ತಿಂಗಳುಗಳಲ್ಲಿ ವಿದ್ಯಾರ್ಥಿಗಳನ್ನು ಪಾಳಿ ಪದ್ಧತಿಯಲ್ಲಿ ದಿನಕ್ಕೆ ಹತ್ತು ವಿದ್ಯಾರ್ಥಿಗಳಂತೆ ವೇಳಾ ಪಟ್ಟಿ ನಿಗದಿಪಡಿಸಿ ಚೆಕ್‌ಲಿಸ್ಟ್ ನಂತೆ ಮುಖ್ಯ ಶಿಕ್ಷಕರ ಕೊಠಡಿಯಲ್ಲಿ ತರಗತಿ ಶಿಕ್ಷಕರು ಪ್ರತಿ ವಿದ್ಯಾರ್ಥಿಯನ್ನು ವೈಯಕ್ತಿಕವಾಗಿ ಅಭ್ಯಾಸ ಸಾಮಾಗ್ರಿಗಳಾದ ಪಠ್ಯ ಪುಸ್ತಕ, ನೋಟ್ಸ್, ಹೋಂ ವರ್ಕ್ ಹಾಗೂ ಇತರ ರೆಫರೆನ್ಸ್ ಪುಸ್ತಕಗಳನ್ನು ಪರಿಶೀಲಿಸುವುದರೊಂದಿಗೆ [ಇದರಿಂದಾಗಿ ಕಲಿಕಾ ಸಾಮಾಗ್ರಿಗಳು ಅಪಡೇಟ್ ಆಗುತ್ತವೆ] ಮನೆಯಲ್ಲಿನ ಕಲಿಕಾ ವಾತಾವರಣದ ಬಗ್ಗೆ ಆಪ್ತ ಸಮಾಲೋಚಿಸಿ ದಾಖಲಿಸಿ ಕೊಳ್ಳುವುದು. ನಂತರ ಶಿಕ್ಷಕರ ಸಭೆಯಲ್ಲಿ ಚರ್ಚಿಸಿ ಸಮಸ್ಯಾತ್ಮಕ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳ ಮನೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪೋಷಕರಿಗೆ ಕಲಿಕ ಪ್ರಗತಿ ಕುರಿತು ಮನವರಿಕೆ ಮಾಡುವುದು.
3. **ಪೋಷಕರ / ತಾಯಂದಿರ [OPEN HOUSE] ಸಭೆ:-** ವರ್ಷಕ್ಕೆ ನಾಲ್ಕು ಬಾರಿ (ಸಮುದಾಯದತ್ತ ಶಾಲೆ ಕಾರ್ಯಕ್ರಮವೂ ಸೇರಿದಂತೆ) ಸಭೆ ಕರೆದು ತಮ್ಮ ಮಕ್ಕಳ ಕಲಿಕಾ ಪ್ರಗತಿಯನ್ನು ಉತ್ತರ ಪತ್ರಿಕೆಗಳನ್ನು ಮತ್ತು ಸಿ.ಸಿ.ಇ. ಚಟುವಟಿಕೆಗಳ ಸಾಧನೆಯನ್ನು ಪ್ರಗತಿ ಪತ್ರದ ದಾಖಲೆಯನ್ನು ಪರಿಶೀಲನೆಗೆ ನೀಡುವುದರೊಂದಿಗೆ ಚರ್ಚಿಸಿ ಮನವರಿಕೆ ಮಾಡುವುದು ಮತ್ತು ಅಭ್ಯಾಸದ ಮಹತ್ವವನ್ನು ಸಮಯದ ಸದುಪಯೋಗವನ್ನು ತಿಳಿಸಿ ಸಹಕಾರ ಕೋರುವುದು.
4. **ಅನುಭವ ಹಂಚಿಕೆ ಕಾರ್ಯಾಗಾರ:-** ಮುಖ್ಯ ಶಿಕ್ಷಕರುಗಳು ಪರಸ್ಪರ ಚರ್ಚಿಸಿ ತಮ್ಮ ಶಾಲೆಯಲ್ಲಿ ವಿಷಯವಾರು ಸಾಧನೆ ಕಡಿಮೆ ಇರುವ ಮತ್ತು ಅನನುಭವಿ ಶಿಕ್ಷಕರಿದ್ದಲ್ಲಿ ಅವರ ಶೈಕ್ಷಣಿಕ ಬಲವರ್ಧನೆಗಾಗಿ ಸಮೀಪದ ಶಾಲೆಯಲ್ಲಿನ ಅನುಭವಿ ಸಂಪನ್ಮೂಲ ವಿಷಯ ಶಿಕ್ಷಕರನ್ನು ಎರಡು ದಿನಗಳು ಶಾಲೆಗೆ ಪರಸ್ಪರ ಕೋರಿಕೆ ಮೇರೆಗೆ ನಿಯೋಜಿಸಿಕೊಂಡು ಪರಸ್ಪರ ವಿಷಯ ವಿನಿಮಯ ಮಾಡಿಕೊಳ್ಳಲು ಆಹ್ವಾನಿಸಿ ವಿದ್ಯಾರ್ಥಿಗಳೊಂದಿಗೆ ಸಮಾಲೋಚಿಸಿ ವಿಷಯ ಬಲವರ್ಧನೆಗೊಳಿಸುವುದು. ಅಗತ್ಯವಿದ್ದಲ್ಲಿ ಹತ್ತಿರದ ಅತ್ಯುತ್ತಮ ಶೈಕ್ಷಣಿಕ ಸಾಧನೆ ಮಾಡಿದ ಶಾಲೆಗಳಿಗೆ ಸಂದರ್ಶನ ನೀಡಿ ಅನುಭವ ಹಂಚಿಕೆ ಮಾಡಿಕೊಳ್ಳುವುದರೊಂದಿಗೆ ವಿವಿಧ ಕಾರ್ಯತಂತ್ರಗಳನ್ನು ಪ್ರತ್ಯೇಕವಾಗಿ ಅನುಭವಿಸಿ ತಮ್ಮ ಶಾಲೆಗಳಲ್ಲಿ ಅನುಷ್ಠಾನಗೊಳಿಸಬಹುದಾಗಿದೆ. ಇದನ್ನು ಜೂನ್

ತಿಂಗಳಲ್ಲೇ ಮಾಡುವುದರೊಂದಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ಮುಂದೆ ಸಂಭವಿಸಬಹುದಾದ ಕಲಿಕಾ ಹಿನ್ನಡೆಯನ್ನು ಸರಿದೂಗಿಸಿಕೊಳ್ಳಬಹುದಾಗಿದೆ.

5. **ಸಂದರ್ಶನ ಸಪ್ತಾಹ:-** ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರ ನೇತೃತ್ವದಲ್ಲಿ ಪ್ರತಿ ವರ್ಷ ಜುಲೈ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿಗಳು ಹಾಗೂ ಉಪಯೋಜನಾ ಸಮನ್ವಯಾಧಿಕಾರಿಗಳು ವಿಷಯವಾರು ಶಿಕ್ಷಕರ ಸಂಪನ್ಮೂಲ ತಂಡದೊಂದಿಗೆ ತಮ್ಮ ವಾಹನಗಳಲ್ಲಿ ಒಂದು ವಾರದ ಕಾಲ ಪ್ರತಿ ದಿನ ಒಂದೊಂದು ತಾಲ್ಲೂಕಿಗೆ ಎಲ್ಲಾ ತಂಡಗಳು ಏಕಕಾಲಕ್ಕೆ ಭೇಟಿ ನೀಡಿ, ಪ್ರತಿ ತಂಡ ದಿನಕ್ಕೆ ತಲಾ ಎರಡು ಶಾಲೆಗಳಂತೆ (ಶೈಕ್ಷಣಿಕ ಹಿನ್ನಡೆ ಸಾಧಿಸಿದ ಆಯ್ದ ಶಾಲೆಗಳಿಗೆ) ಭೇಟಿ ನೀಡಿ ಕೇವಲ ಶೈಕ್ಷಣಿಕ ತಪಾಸಣೆಯನ್ನು (ನಿಗದಿಪಡಿಸಿದ ಚೆಕ್‌ಲಿಸ್ಟ್‌ನಂತೆ) ಮಾತ್ರ ವಿಷಯವಾರು ಸಂಪನ್ಮೂಲ ಶಿಕ್ಷಕರಿಂದ ನಿರ್ವಹಿಸಿ ಫಲಿತಾಂಶ ಸುಧಾರಣೆಗೆ ಮಾರ್ಗದರ್ಶನ ನೀಡುವುದಾಗಿದೆ. ಅಂತಿಮವಾಗಿ ಸಪ್ತಾಹದ ನಂತರ ಎಲ್ಲರೂ ಸಭೆ ಸೇರಿ ಚರ್ಚಿಸಿ ಶಾಲಾವಾರು, ವಿಷಯವಾರು ಹಿನ್ನಡೆಗೆ ಕಾರಣಗಳನ್ನು ಹುಡುಕಿ ಸ್ಥಳದಲ್ಲಿಯೇ ಪರಿಹಾರಕ್ಕೆ ನಿರ್ಣಯಗಳನ್ನು ಕೈಗೊಂಡು ಮುಂದಿನ ಸಂದರ್ಶನ ಸಪ್ತಾಹದಲ್ಲಿ ಪ್ರಗತಿ ಪರಿಶೀಲಿಸಬಹುದಾಗಿದೆ. ಇದರ ಸದುಪಯೋಗವನ್ನು ಶಾಲೆಗಳು ಹಾಗೂ ಸಂಪನ್ಮೂಲ ತಂಡಗಳು ಪರಸ್ಪರ ಅನುಭವ ಹಂಚಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತದೆ.

6. **ಸಿ.ಸಿ.ಇ., ಚಟುವಟಿಕೆಗಳು/ಪ್ರಾಜೆಕ್ಟ್ ವರ್ಕ್ಸ್:-** 10ನೇ ತರಗತಿಯಲ್ಲಿ ಪ್ರತಿ ವಿಷಯದಲ್ಲಿ ತಲಾ 8 ಪ್ರಾಜೆಕ್ಟ್ ವರ್ಕ್ಸ್ ಗಳನ್ನು ನೀಡಿ ಆಂತರಿಕ ಮೌಲ್ಯಾಂಕನ ವಿಶ್ಲೇಷಣೆ ಮಾಡಿ ಅಂಕ ದಾಖಲಿಸಬೇಕಾಗುತ್ತದೆ. ಇದಕ್ಕಾಗಿ ಕೆಲವು ಕ್ರಿಯಾ ಶೀಲ ಪ್ರಾಜೆಕ್ಟ್ ವರ್ಕ್ಸ್ (ಚಟುವಟಿಕೆ)ಗಳನ್ನು ಕೆಳಕಂಡಂತೆ ವಿದ್ಯಾರ್ಥಿಗಳಿಗೆ ನೀಡುವುದರೊಂದಿಗೆ ಪರೀಕ್ಷೆಗೆ ಪೂರಕವಾಗಿ ಸಿದ್ದತೆ ಗೊಳಿಸುವ ಫಲಿತಾಂಶ ಮುಖಿ ಕಾರ್ಯಕ್ರಮಗಳಾಗಿದೆ.

- **ಸಮಗ್ರ ರಸ ಪ್ರಶ್ನೆ ಕಾರ್ಯಕ್ರಮ:-** ಪ್ರತಿ ವಿಷಯದಲ್ಲಿ ಈಗಾಗಲೇ ಶ್ರೇಣೀಕರಿಸಿ ಆರು ಗುಂಪುಗಳನ್ನಾಗಿಸಿದ ತಂಡಗಳಿಗೆ ಏಕ ಕಾಲಕ್ಕೆ ಆರು ವಿಷಯಗಳಿಗೆ ಸಂಬಂಧಿಸಿದಂತೆ ತಲಾ ಎರಡು ಸುತ್ತಿನಲ್ಲಿ ಅಂದರೆ, 12 ಪ್ರಶ್ನೆಗಳನ್ನು ತಲಾ 02 ಅಂಕಗಳಂತೆ ಒಟ್ಟು 24 ಅಂಕಗಳಿಗೆ ರಸಪ್ರಶ್ನೆ ಕಾರ್ಯಕ್ರಮ ನಿರ್ವಹಿಸಿ ಕೆಳಕಂಡ ಸ್ಕೋರ್‌ಲಿಸ್ಟ್ ನಂತೆ ಲಂಬ ಮತ್ತು ಅಡ್ಡ ಸಾಲುಗಳಲ್ಲಿ ಕ್ರೋಢಿಕರಿಸಿ ತಂಡದ ಸಾಧನೆಯನ್ನು ಜೊತೆ-ಜೊತೆಯಲ್ಲಿ ವಿಷಯವಾರು 24 ಅಂಕಗಳಿಗೆ ಮತ್ತು ಸಮಗ್ರವಾಗಿ 144 ಅಂಕಗಳಿಗೆ ಪಡೆದ ಅಂಕಗಳನ್ನು ವಿಶ್ಲೇಷಿಸಿ ಪ್ರಶಂಸಿಸುವುದಾಗಿದೆ. ಇದನ್ನು ಪ್ರತಿ 15 ದಿನಗಳಿಗೊಮ್ಮೆ ಅಂದರೆ, ಸೋಮವಾರ ರಸಪ್ರಶ್ನೆ ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ವಿಷಯವಾರು ಪಠ್ಯಾಂಶವನ್ನು ಪೂರ್ವ ಸಿದ್ದತೆಗಾಗಿ ವಿದ್ಯಾರ್ಥಿಗಳಿಗೆ ತಿಳಿಸಿ 2 ನೇ / 4 ನೇ ಶನಿವಾರಗಳಂದು ಎಲ್ಲಾ ಶಿಕ್ಷಕರು ಮತ್ತು ತಂಡಗಳು ಒಂದೆಡೆ ಸೇರಿ ವಿಷಯವಾರು ಸಮಗ್ರ ರಸಪ್ರಶ್ನೆ ಕಾರ್ಯಕ್ರಮ ನಿರ್ವಹಿಸುವುದರೊಂದಿಗೆ ತಮ್ಮ-ತಮ್ಮ ವಿಷಯದ ಕಲಿಕಾ ಕೊರತೆಯನ್ನು ಆಧರಿಸಿ ಪುನರಾವರ್ತನೆ ಮತ್ತು ಗುಂಪು ಅಧ್ಯಯನ ತರಗತಿಗಳಲ್ಲಿ ಸರಿದೂಗಿಸಿಕೊಳ್ಳಬಹುದಾಗಿದೆ. ಅಗತ್ಯಾನುಸಾರ ಒಂದು ಬಾರಿ ವಿದ್ಯಾರ್ಥಿಗಳಿಂದಲೇ ಕಾರ್ಯಕ್ರಮ ನಿರ್ವಹಿಸಿ ಪ್ರೋತ್ಸಾಹಿಸಬಹುದಾಗಿದೆ. (ಇದನ್ನು ಒರ್ವ ಶಿಕ್ಷಕರಿಗೆ ಕ್ವಿಜ್ ಮಾಸ್ಟರ್ ಎಂದು ಪ್ರಭಾರ ನೀಡಿ ನಿರ್ವಹಿಸುವುದು)

**ಸಮಗ್ರ ರಸಪ್ರಶ್ನೆ ಕಾರ್ಯಕ್ರಮದ ಸ್ಕೋರಿಂಗ್ ಟೇಬಲ್ .**

| ತಂಡಗಳು | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ | ಗಣಿತ | ವಿಜ್ಞಾನ | ಸಮಾಜ ವಿಜ್ಞಾನ | ಒಟ್ಟು |
|---|---|---|---|---|---|---|---|
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| 5 | | | | | | | |
| 6 | | | | | | | |
| ಒಟ್ಟು | 24 | 24 | 24 | 24 | 24 | 24 | 144 |

**ಅನಿರೀಕ್ಷಿತ ಪರೀಕ್ಷೆ (Surprise test) ಮತ್ತು ಮೌಲ್ಯಾಂಕನ ವಿಶ್ಲೇಷಣೆ:-** ದೈನಂದಿನ ಪಾಠದ ನಿರೀಕ್ಷೆಯಲ್ಲಿರುವ ವಿದ್ಯಾರ್ಥಿಗಳಿಗೆ ಅನಿರೀಕ್ಷಿತವಾಗಿ ಕಿರು-ಪರೀಕ್ಷೆಯನ್ನು ಸ್ಥಳದಲ್ಲಿಯೇ ಅಂದರೆ, ಬೋಧನಾ ಅವಧಿಗೆ (45 ನಿಮಿಷಗಳಿಗೆ) ಮಿತಿಗೊಳಿಸಿ ಪ್ರಶ್ನೆಗಳನ್ನು ನೀಡಿ ಉತ್ತರಗಳನ್ನು ತಮ್ಮ ನೋಟ್ ಪುಸ್ತಕದ ಒಂದು ಹಾಳೆಯಲ್ಲಿ ಬರೆಯಲು ಹೇಳುವುದು, ನಂತರ ಮೌಲ್ಯಮಾಪನ ವಿಧಾನವನ್ನು ತಿಳುವಳಿಕೆ ನೀಡಿ ಉತ್ತರ ಪತ್ರಿಕೆಗಳನ್ನು ಪರಸ್ಪರ ವಿನಿಮಯ ಮಾಡಿ ಮೌಲ್ಯ ಮಾಪನ ಮಾಡಲು ತಿಳಿಸುವುದು. ಅಂತಿಮವಾಗಿ ವಿಶ್ಲೇಷಣೆ ಕೇಳಿ ಅಂಕ ದಾಖಲಿಸಿಕೊಳ್ಳುವುದು. ಇದರಿಂದಾಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಉತ್ತರಿಸುವುದು ಮತ್ತು ಮೌಲ್ಯಾಂಕನದ ಅನುಭವವಾಗುತ್ತದೆ.

- **ತೆರದ ಪುಸ್ತಕ ಪರೀಕ್ಷೆ:-** ವಿಷಯವಾರು 25 ಅಂಕಗಳಿಗೆ ವರ್ಶನ್‌ವಾರು ಪ್ರಶ್ನೆ ಪತ್ರಿಕೆ ತಯಾರಿಸಿ ಸಮಯ ನಿಗದಿಪಡಿಸಿ ವಿದ್ಯಾರ್ಥಿಗಳಿಗೆ ಪುಸ್ತಕ ನೋಡಿ ಗುರುತಿಸಿ ಉತ್ತರಿಸಲು ತಿಳಿಸುವುದು. ಇದರಿಂದಾಗಿ ವಿದ್ಯಾರ್ಥಿಗಳು ಪಠ್ಯ ಪುಸ್ತಕವನ್ನು ಓದುವ ಅಭ್ಯಾಸದ / ಅವಶ್ಯಕತೆಯ ಅರಿವಾಗುತ್ತದೆ.
- **ವಸ್ತು ಪ್ರದರ್ಶನಗಳು:-** ವರ್ಷಕ್ಕೊಮ್ಮೆ ವಿಜ್ಞಾನ ವಿಷಯಕ್ಕೆ ಮಾತ್ರ ಸೀಮಿತಗೊಳಿಸದೇ ಎಲ್ಲಾ ವಿಷಯಗಳಲ್ಲಿ ಫಲಿತಾಂಶ ಮುಖಿ ಆಯ್ದ ಪ್ರಶ್ನೆಗಳನ್ನು ನೀಡಿ ಅದರನ್ವಯ ಬೋಧನೋಪಕರಣಗಳನ್ನು ಬಳಸಿ ಮಾದರಿ / ಪ್ರಾತ್ಯಕ್ಷಿಕೆಗಳನ್ನು ನೀಡುವಂತೆ ಸ್ಪರ್ಧೆ ಏರ್ಪಡಿಸುವುದು.

- **ವಿವಿಧ ಶೈಕ್ಷಣಿಕ ಸ್ಪರ್ಧೆಗಳು / ಚಟುವಟಿಕೆಗಳು:-** ಪಠ್ಯಾಧಾರಿತ ಚರ್ಚಾ ಸ್ಪರ್ಧೆ, ಆಶು ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಮಾದರಿ ತಯಾರಿಕೆ, ಗಣಿತಜ್ಞರ/ ವಿಜ್ಞಾನಿಗಳ/ಸಾಹಿತಿಗಳ ಜೀವನ ಚರಿತ್ರೆ ಸಂಗ್ರಹಣ, ಕಂಠಪಾಠ ಸ್ಪರ್ಧೆ, ಪಠ್ಯಾಧಾರಿತ ಗೋಷ್ಠಿಗಳು ಇತರೆ ಚಟುವಟಿಗಳನ್ನು ಆರು ಗುಂಪುಗಳ ಮಧ್ಯೆ ಪರಸ್ಪರ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರಗತಿ ದಾಖಲಿಸುವುದು.

- **ಪ್ರಾತ್ಯಕ್ಷಿಕೆ/ಸೆಮಿನಾರ್:-** ಆರು ಗುಂಪುಗಳಿಗೆ ವಿಷಯವಾರು ತಲಾ ಒಂದೊಂದು ಅಧ್ಯಾಯದಲ್ಲಿ ಬೋಧನೆ / ಸೆಮಿನಾರ್ ಪ್ರಾತ್ಯಕ್ಷಿಕೆ ಏರ್ಪಡಿಸುವುದು. ಒಂದು ತಂಡ ಪ್ರಾತ್ಯಕ್ಷಿಕೆ ನೀಡುವಾಗ ಉಳಿದ ಐದು ತಂಡಗಳು ಆ ವಿಷಯದ ಮೇಲೆ ಪ್ರಶ್ನೋತ್ತರಗಳ ಸಂವಾದ ಏರ್ಪಡಿಸುವುದು.

**ವಿದ್ಯಾರ್ಥಿಗಳೊಂದಿಗೆ ಸಂವಾದ / ಮುಖಾಮುಖಿ ಕಾರ್ಯಕ್ರಮ:-** ಪರೀಕ್ಷಾ ಪೂರಕವಾಗಿ ಆಯ್ದ ಶಾಲೆಗಳ ವಿದ್ಯಾರ್ಥಿಗಳೊಂದಿಗೆ ಸಂಪನ್ಮೂಲ ಶಿಕ್ಷಕರ ತಂಡ ಒಂದೆಡೆ ಸೇರಿ ವಿದ್ಯಾರ್ಥಿಗಳಿಗೆ ಗೊಂದಲವಿರುವ ವಿಷಯದ ಕುರಿತು ಚರ್ಚಿಸಲು / ಪ್ರಶ್ನಿಸಲು ಅಥವಾ ಒಂದು ಚೀಟಿಯಲ್ಲಿ ಬರೆದು ನೀಡಲು ತಿಳಿಸಿ, ನಂತರ ಅದಕ್ಕೆ ಪರಿಹಾರವನ್ನು ಸಲಹಾತ್ಮಕವಾಗಿ ಸಂಪನ್ಮೂಲ ತಂಡ ನೇರವಾಗಿ ಮುಖಾಮುಖಿ ಮಾರ್ಗದರ್ಶನ ಮಾಡುವ ಕಾರ್ಯಕ್ರಮವಾಗಿದೆ.

ಹೀಗೆ ಮೇಲ್ಕಂಡಂತೆ ಹಲವು ಜಿಲ್ಲೆಗಳಲ್ಲಿ ಕೈಗೊಂಡ ಆವಿಷ್ಕೃತ [Innovative] ಚಟುವಟಿಕೆಗಳನ್ನು ಸಲಹಾತ್ಮಕವಾಗಿ ದಾಖಲಿಸಿದೆ.ಇವುಗಳನ್ನು ಸೃಜನಶೀಲತೆಯಿಂದ ವಿಷಯವಾರು ಆಯೋಜಿಸಿ ವಿದ್ಯಾರ್ಥಿಗಳನ್ನು ಫಲಿತಾಂಶ ಮುಖಿಯಾಗಿ ಅಣಿಗೊಳಿಸುವುದರೊಂದಿಗೆ ಇಲಾಖೆ ನಿಗದಿಪಡಿಸಿದ ಆಯ್ದ ಎಂಟು ಪ್ರಾಜೆಕ್ಟ್ ವರ್ಕ್ಸ್‌ಗಳನ್ನು ಸಿ.ಸಿ.ಇ., ಅಡಿ ಸಂಘಟಿಸಿ ಪ್ರಗತಿಯನ್ನು ವಿಶ್ಲೇಷಿಸಿ ಅಂಕ ದಾಖಲಿಸಬಹುದಾಗಿದೆ.

**ಗುಂಪು ಅಧ್ಯಯನ ಮತ್ತು ಮನೆಗೆಲಸ ಹಂಚಿಕೆ:-** ದೈನಂದಿನ ಶಾಲೆಯ ಸಂಜೆಯ ಅವಧಿಯಲ್ಲಿ ಒಂದು ಗಂಟೆ ವಿದ್ಯಾರ್ಥಿಗಳಿಗೆ ನೀಡುವ ಗುಂಪು ಅಧ್ಯಯನವನ್ನು ಪ್ರತಿ ದಿನಕ್ಕೆ ಒಂದು ವಿಷಯವನ್ನು ನಿಗದಿಪಡಿಸುವುದರ ಬದಲಾಗಿ ಪ್ರತಿ ತಂಡಕ್ಕೆ ಒಂದು ವಿಷಯವನ್ನು ಪಾಳಿ ಪದ್ಧತಿಯಲ್ಲಿ ಆರು ತಂಡಗಳಿಗೆ ನಿಗದಿಪಡಿಸಿ ಆಯಾ ವಿಷಯ ಶಿಕ್ಷಕರು ಸಹ ನಿಗದಿಪಡಿಸಿದ ಪಾಳಿ ಪದ್ಧತಿಯಂತೆ ತಮ್ಮ-ತಮ್ಮ ವಿಷಯದಲ್ಲಿ ಗುಂಪು ಅಧ್ಯಯನಕ್ಕೆ ಪೂರಕ ಅಧ್ಯಯನ ವಿಷಯವನ್ನು ನಿಗದಿಪಡಿಸಿ ದಿನದ ಕೊನೆಯಲ್ಲಿ ಪ್ರಗತಿ ವಿಶ್ಲೇಷಿಸಿ ಮಾರ್ಗದರ್ಶನ ಮಾಡುವುದು ಹಾಗೂ ವಿದ್ಯಾರ್ಥಿವಾರು ಕಲಿಕಾ ಸಾಧನೆಯನ್ನು ಆಧರಿಸಿ ಮನೆಗೆಲಸ (ಹೋಂವರ್ಕ್) ನೀಡುವುದು. ಮಾರನೆಯ ದಿನ ಪ್ರಾರ್ಥನೆಯ ನಂತರ ಶಿಕ್ಷಕರ ಕೊಠಡಿಯಲ್ಲಿ ಆಯಾ ಗುಂಪಿನ ವಿದ್ಯಾರ್ಥಿಗಳು ಸಂಬಂಧಿಸಿದ ವಿಷಯ ಶಿಕ್ಷಕರಿಗೆ ಪರಿಶೀಲನೆಗೆ ಹಾಜರುಪಡಿಸುವುದು. ಶಿಕ್ಷಕರು ಪರಿಶೀಲಿಸಿ ಸ್ಥಳದಲ್ಲಿಯೇ ಮಾರ್ಗದರ್ಶನ ನೀಡುವುದು(ಇದರಿಂದಾಗಿ ವಿದ್ಯಾರ್ಥಿಗಳಿಗೆ ಮನೆಗೆಲಸದ ಹೊರೆ ಕಡಿಮೆ ಮಾಡಿದಂತಾಗುತ್ತದೆ.

7. **ಫಲಿತಾಂಶ ಮುಖಿ ಗ್ರಂಥಾಲಯ (Result Oriented Library) ಸ್ಥಾಪನೆ:-**ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ ಮಾತ್ರ ಎಂದು ಸೀಮಿತಗೊಳಿಸಿ ಪ್ರತ್ಯೇಕ ಕೊಠಡಿಯಲ್ಲಿ ಗ್ರಂಥಾಲಯ/ವಾಚನಾಲಯ ಸ್ಥಾಪಿಸುವುದು. ಇದರಲ್ಲಿ ಕೇವಲ ಎಸ್.ಎಸ್.ಎಲ್.ಸಿ ಪಠ್ಯಾಧಾರಿತ ಮತ್ತು ಪರೀಕ್ಷೆಗೆ ಪೂರಕ ಸಾಮಗ್ರಿಗಳನ್ನು ಮಾತ್ರ ಅಂದರೆ, ಮಾದರಿ ಉತ್ತರ ಪತ್ರಿಕೆಗಳು(ಮೌಲ್ಯ ಮಾಪನ ಸಂದರ್ಭದಲ್ಲಿ ಶಿಕ್ಷಕರಿಗೆ ನೀಡಿದ ಕೀ ಆನ್ಸರ್ ಬುಕ್-ಲೆಟ್ ಮತ್ತು ಆಯಾ ವರ್ಷದಲ್ಲಿ ರಾಜ್ಯಕ್ಕೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಛಾಯಾ ಪ್ರತಿಗಳನ್ನು ಮಂಡಳಿಯಿಂದ ಪಡೆದು), ಪ್ರಶ್ನೆ ಕೋಠಿ, ಸ್ಕೋರಿಂಗ್ & ಪಾಸಿಂಗ್ ಪ್ಯಾಕೇಜ್, ನಂತಹ ಮಾದರಿ ಕೈಪಿಡಿಗಳು, ವ್ಯಾಕರಣ ಪುಸ್ತಕಗಳು, ಅನ್ವಯಿಕ ಪ್ರಶ್ನೋತ್ತರಗಳ ಪತ್ರಿಕೆಗಳು, ಗಣಿತ ಮಾರ್ಗದರ್ಶಿ, ಆಕರ ಗ್ರಂಥಗಳು, ದಿನ ಪತ್ರಿಕೆಗಳಲ್ಲಿ ಪ್ರಕಟವಾಗುವ ಪೂರಕ ವರದಿಗಳು(ದಶ ದೀವಿಗೆ), ಹಿಂದಿನ ವರ್ಷಗಳ ಸರಣಿ ಪರೀಕ್ಷೆಗಳ ಪ್ರಶ್ನೆ / ಉತ್ತರ ಪತ್ರಿಕೆಗಳು, ಕಲಿಕೆಗೆ ಸಹಕಾರಿಯಾಗುವ ಇ-ಲರ್ನಿಂಗ್ ವೆಬ್ ಸೈಟ್, ಯೂಟ್ಯೂಬ್ ಇತರೆ ಪೂರಕ ಸಾಮಗ್ರಿಗಳನ್ನು ಸಂಗ್ರಹಿಸಿ ಕನಿಷ್ಟ 10 ಸೆಟ್ ಗಳಂತೆ ವಿಷಯವಾರು ಪ್ರತ್ಯೇಕ ಕಪಾಟುಗಳಲ್ಲಿ ಅಳವಡಿಸಿಡುವುದು.

8. **ಎಸ್.ಎಸ್.ಎಲ್.ಸಿ ನಂತರ ಮುಂದೇನು:-** ಕೊಠಡಿಯ ಒಂದು ಮೂಲೆಯಲ್ಲಿ ಪ್ರತ್ಯೇಕ ಕಪಾಟಿನಲ್ಲಿ ಎಸ್.ಎಸ್.ಎಲ್.ಸಿ ನಂತರ ಮುಂದೇನು? ಎಂಬ ಶೀರ್ಷಿಕೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ಭವಿಷ್ಯದ ವ್ಯಾಸಂಗಕ್ಕೆ ಮಾರ್ಗದರ್ಶನವಾಗಿ ವಿವಿಧ ಕೋರ್ಸ್ ಗಳ ಮತ್ತು ಕೌಶಲ್ಯಾಧಾರಿತ ಕೋರ್ಸ್ ಗಳನ್ನು ಎಲ್ಲಿ? ಹೇಗೆ ವ್ಯಾಸಂಗ ಮಾಡಬಹುದು ಮತ್ತು ಸರ್ಕಾರದ ವಿವಿಧ ವಿದ್ಯಾರ್ಥಿ ವೇತನಗಳು ಮತ್ತು ಉಚಿತ ಸೌಲಭ್ಯಗಳನ್ನು ಹೊಂದಲು ಬೇಕಾಗುವ ಮಾಹಿತಿಗಳನ್ನು ಹಾಗೂ ತಮ್ಮ ಆಸಕ್ತಿಯ ವಿಷಯಕ್ಕೆ ಅನುಗುಣವಾಗಿ ಯಾವ ಕ್ಷೇತ್ರದಲ್ಲಿ ವ್ಯಾಸಂಗ ಮಾಡಬಹುದು ಎಂಬುದನ್ನು ಸ್ವತಂತ್ರ್ಯವಾಗಿ ತೀರ್ಮಾನಿಸಲು ಸಹಾಯವಾಗುವಂತೆ ಪೂರಕ ದಾಖಲೆಗಳನ್ನು ಸಂಗ್ರಹಿಸಿಡುವುದು.

- ಸದರಿ ಕೊಠಡಿಯಲ್ಲಿ ವಿದ್ಯಾರ್ಥಿಗಳಿಗೆ ಅಧ್ಯಯನಶೀಲರಾಗಲು ಆಸನ ವ್ಯವಸ್ಥೆಯನ್ನು ಮಾಡಿ ಎಲ್ಲಾ ಮೇಲ್ಕಂಡ ಸಾಮಗ್ರಿಗಳು ಮುಕ್ತವಾಗಿ ಕೈಗೆಟುಕುವಂತೆ ಜೋಡಿಸಿ ಉಸ್ತುವಾರಿ ಮಾಡುವುದು.ಸದರಿ ಗ್ರಂಥಾಲಯವನ್ನು ಶಾಲೆಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಅಥವಾ ಶಾಲೆಯ ಹಳೆಯ ವಿದ್ಯಾರ್ಥಿಗಳು ಅಥವಾ ದಾನಿಗಳ ನೆರವಿನಿಂದ / ಅವರ ಹೆಸರಿನಿಂದ ಸ್ಥಾಪಿಸಿ ವಿದ್ಯಾರ್ಥಿಗಳ ಪ್ರತಿಭಾ ಪೋಷಣೆ ಮಾಡಬಹುದಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ಶಿಕ್ಷಕರಿಗೂ ಬೋಧನೆಗೆ ಪೂರಕ ಮಾಹಿತಿ ಮತ್ತು ದಾಖಲೆ ಲಭ್ಯವಾದಂತಾಗುತ್ತದೆ.

9. **ಪ್ರೇರಣಾತ್ಮಕ [For Inspiration] ಚಟುವಟಿಕೆ:-** ಗ್ರಂಥಾಲಯದ ಒಂದು ಭಾಗದಲ್ಲಿ ಪ್ರಸ್ತುತ ವರ್ಷದಲ್ಲಿ ಆಯೋಜಿಸಿದ ಪ್ರತಿ ಪರೀಕ್ಷೆಯ ಟಾಪ್-10 ಸಾಧಕರ ಪಟ್ಟಿಯನ್ನು ಪ್ರಕಟಿಸುವುದು ಹಾಗೂ ಕಳೆದ ಹತ್ತು ವರ್ಷಗಳ ಶಾಲಾ ಟಾಪರ್ ವಿದ್ಯಾರ್ಥಿಗಳ ಭಾವ ಚಿತ್ರದೊಂದಿಗೆ, ಗಳಿಸಿದ ಅಂಕಗಳು ಮತ್ತು ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಕೋರ್ಸ್‌ನ / ಸಾಧನೆಯ ವಿವರ ದಾಖಲಿಸಿ ಪ್ರಸಕ್ತ ಸಾಲಿಗೆ ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಖಾಲಿ ಬಿಡುವುದು. ಪ್ರತಿ ದಿನ ಸಾಧಕ ವಿದ್ಯಾರ್ಥಿಗಳಿಗೆ ಇದು ಪ್ರೇರಣಾತ್ಮಕವಾಗಿರುತ್ತದೆ.

10. **ಇ-ಕಲಿಕಾ ಕೇಂದ್ರ ಸ್ಥಾಪನೆ:-** ಪ್ರತಿ ಶಾಲೆಯಲ್ಲಿ ಲಭ್ಯ ಅನುದಾನ ಬಳಸಿ ಮತ್ತು ಸಾರ್ವಜನಿಕರ ಸಹಕಾರದೊಂದಿಗೆ "ಇ-ಕಲಿಕಾ ಕೇಂದ್ರ" ಪ್ರಾರಂಭಿಸುವುದು. ಅಂದರೆ ಪ್ರೊಜೆಕ್ಟರ್, ಕ್ಯಾಮರಾ, ಸ್ಕ್ರೀನ್, ಕಂಪ್ಯೂಟರ್, ಲ್ಯಾಪ್ ಟಾಪ್ ಅಳವಡಿಸಿ ಒಂದು ಕೊಠಡಿಯನ್ನು ಆಡಿಯೋ-ವಿಡಿಯೋ ಥಿಯೇಟರ್ ಆಗಿ ಪರಿವರ್ತಿಸಿ ಬೋಧನಾ/ಕಲಿಕಾ ದೃಶ್ಯಾವಳಿಗಳು, ಕ್ರಾಫ್ಟ್, ಮನರಂಜನಾ ಚಟುವಟಿಕೆಗಳು ವಿವಿಧ ಸ್ಲೈಡ್‌ಗಳು, ಶಾಲೆಯಲ್ಲಿ ಕೈಗೊಂಡ ಕಾರ್ಯಕ್ರಮಗಳು, ಅಂತರ್ಜಾಲ ವ್ಯವಸ್ಥೆಯನ್ನು ಕಲ್ಪಿಸುವುದರೊಂದಿಗೆ ವಿಶ್ವಕೋಶವನ್ನು ಪರಿಚಯಿಸುವುದು. ಹೀಗೆ ಇತರ ಕೌಶಲ್ಯಗಳನ್ನು ವಿದ್ಯಾಥಿ ಗಳಿಗೆ ಪ್ರಾತ್ಯಕ್ಷಿಸುತ್ತಾ ಕಲಿಯುವಂತೆ ಪ್ರೇರೇಪಿಸಲು ಮತ್ತು ವೀಕ್ಷಿಸಲು ಸಹಾಯವಾಗುವಂತೆ ಅಳವಡಿಸುವುದು. ಶಾಲೆಯಲ್ಲಿ ಅನುದಾನದ ಲಭ್ಯವಿಲ್ಲದಿದ್ದಲ್ಲಿ ಸ್ಥಳೀಯ ದಾನಿಗಳಿಂದ ಅಳವಡಿಸಿ ಅದಕ್ಕೆ ಹೆಸರನ್ನು ನಾಮಕರಣ ಮಾಡಲು ನಿಯಮಾನುಸಾರ ಕ್ರಮವಹಿಸುವುದು. ಇದನ್ನು ಅಗತ್ಯಾನುಸಾರ ಆನ್‌ಲೈನ್ ತರಗತಿ ನೀಡಲು ಬಳಸಿಕೊಳ್ಳಬಹುದಾಗಿದೆ.

11. **ಸರಣಿ ಪರೀಕ್ಷೆಗಳ ನಿರ್ವಹಣೆ:-** ಪ್ರತಿ ವರ್ಷ ಡಿಸೆಂಬರ್ ಮಾಹೆಯೊಳಗಾಗಿ ಎಲ್ಲಾ ಪೂರಕ ವಿಷಯವಾರು ಸಿಲಬಸ್ ಮುಕ್ತಾಯಗೊಳಿಸಿ, ಮುಖ್ಯ ಪರೀಕ್ಷೆಗೆ ಪೂರ್ವ ತಯಾರಿಯಾಗಿ ಜನವರಿಯಲ್ಲಿ ತಾಲ್ಲೂಕು ಮಟ್ಟ, ಫೆಬ್ರುವರಿಯಲ್ಲಿ ಜಿಲ್ಲಾ ಮಟ್ಟ ಹಾಗೂ ಮಾರ್ಚ್‌ನಲ್ಲಿ ರಾಜ್ಯ ಮಟ್ಟದಲ್ಲಿ ಮೂರು ಸರಣಿ(ಅಭ್ಯಾಸ) ಪರೀಕ್ಷೆಗಳನ್ನು ಕೈಗೊಳ್ಳುವುದು.

- **ಅಣಕು ಪರೀಕ್ಷೆ:-**ಫೆಬ್ರುವರಿ ತಿಂಗಳ ಸರಣಿ ಪರೀಕ್ಷೆಯನ್ನು ಪ್ರತಿಷ್ಠಿತವಾಗಿ ಪರಿಗಣಿಸಿ, ಮಂಡಳಿ ನಡೆಸುವ ಪರೀಕ್ಷೆಯಂತೆ ಅಣಕು ಪರೀಕ್ಷೆಯನ್ನು ನಿರ್ವಹಿಸುವುದು.ಇದಕ್ಕೆ ಪೂರಕವಾಗಿ ಮೂರು ರೀತಿಯ ಮಾದರಿ

ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲು ಪ್ರಶ್ನೆಪತ್ರಿಕೆ ತಯಾರಿಕೆ ಕಾರ್ಯಾಗಾರವನ್ನು ಹಮ್ಮಿಕೊಂಡು ಅದರಲ್ಲಿ ಒಂದನ್ನು ಆಯ್ದು ಅಣಕು ಪರೀಕ್ಷೆಗೆ ಬಳಸುವುದು

- **ಕೇಂದ್ರೀಕೃತ ಮೌಲ್ಯಮಾಪನ**:-ಸದರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಪ್ರತಿ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಒಂದು ಶಾಲೆಯನ್ನು ಮೌಲ್ಯ ಮಾಪನ ಕೇಂದ್ರವಾಗಿ ಗುರುತಿಸಿ ಪರೀಕ್ಷೆ ನಡೆಯುವಾಗ ಆಯಾ ದಿನದ ಉತ್ತರ ಪತ್ರಿಕೆಗಳೊಂದಿಗೆ ಮರು ದಿನ ಸಂಬಂಧಿಸಿದ ವಿಷಯ ಬೋಧಕರು ನಿಗದಿಪಡಿಸಿದ ಮೌಲ್ಯ ಮಾಪನ ಕೇಂದ್ರಕ್ಕೆ ಹಾಜರಾಗುವುದು. ಕೇಂದ್ರದ ಮುಖ್ಯಸ್ಥರು ಉತ್ತರ ಪತ್ರಿಕೆಗಳನ್ನು ಡಿ-ಕೋಡಿಂಗ್(ಅಂದರೆ ಒಂದು ಶಾಲೆಯ ಉತ್ತರ ಪತ್ರಿಕೆಗಳನ್ನು ಮತ್ತೊಂದು ಶಾಲೆಯ ಮೌಲ್ಯ ಮಾಪಕರಿಗೆ ನೀಡುವುದು) ಮೌಲ್ಯ ಮಾಪನ ಮಾಡಲು ತಿಳಿಸುವುದು. ಅಂತಿಮವಾಗಿ ಒಂದು ಕಡೆ ಟ್ಯಾಬುಲೇಶನ್ ಅಂದರೆ ವಿದ್ಯಾರ್ಥಿವಾರು ಪಡೆದ ಅಂಕಗಳನ್ನು ದಾಖಲಿಸಿ ತಾಲ್ಲೂಕಿನ ಟಾಪ್ ಟೆನ್ ಹಾಗೂ ಅನುತ್ತೀರ್ಣರಾದ ವಿದ್ಯಾರ್ಥಿಗಳ ಯಾದಿಯನ್ನು ತಯಾರಿಸುವುದು. ಸದರಿ ಕಾರ್ಯವನ್ನು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಘಟಿಸಿ ಸದರಿ ಯಾದಿಯನ್ನು ಮುಂದಿನ ಕ್ರಮಕ್ಕೆ ಜಿಲ್ಲಾ ಕಛೇರಿಗೆ ನೀಡುವುದು (ಫೆಬ್ರುವರಿ 8 ನೇ ತಾರೀಖಿನಿಂದ 18 ನೇ ತಾರೀಖಿನೊಳಗಾಗಿ ಸದರಿ ಪರೀಕ್ಷೆಯನ್ನು ನಿರ್ವಹಿಸಿ ಜಿಲ್ಲಾ ಕಛೇರಿಗೆ ವರದಿ ಮಾಡುವುದು).

12.**ಫಲಿತಾಂಶ ಮುಖಿ ತರಬೇತಿ ಶಿಬಿರಗಳು**:- ಮೇಲ್ಕಂಡ ಪರೀಕ್ಷೆಗಳಲ್ಲಿ ಉತ್ತಮ ಸಾಧನೆಗೈದ ಮತ್ತು ಕೆಳಮಟ್ಟದ ಸಾಧನೆಗೈದ ವಿದ್ಯಾರ್ಥಿಗಳಿಗಾಗಿ ಫೆಬ್ರುವರಿ 21 ರಿಂದ 28 ನೇ ತಾರೀಖಿನವರೆಗೆ ಕೆಳಕಂಡಂತೆ ಮೂರು] ತರಬೇತಿ ಶಿಬಿರಗಳನ್ನು ಸ್ಥಳೀಯರ ಸಹಕಾರದೊಂದಿಗೆ ಆಯೋಜಿಸುವುದು. ಸದರಿ ತರಬೇತಿಗಳ ನಂತರ ಸಂಭವನೀಯ ಅನುತ್ತೀರ್ಣರಾಗುವ ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಪ್ರತ್ಯೇಕವಾಗಿ ವ್ಯಾಸಂಗಕ್ಕೆ ವ್ಯವಸ್ಥೆ ಮಾಡಿ ಅನುಪಾಲನೆ ಮಾಡುವುದು.

- **ಪ್ರೇರಣಾ ಶಿಬಿರ:-** ಮೇಲ್ಕಂಡಂತೆ ನಿರ್ವಹಿಸಿದ ಪರೀಕ್ಷೆಯಲ್ಲಿ ಟಾಪ್-10 ವಿದ್ಯಾರ್ಥಿಗಳನ್ನು ಎಲ್ಲಾ ತಾಲ್ಲೂಕುಗಳಿಂದ ಜಿಲ್ಲಾ ಕೇಂದ್ರಕ್ಕೆ ನಿಯೋಜಿಸಿಕೊಂಡು ಸಂಭವನೀಯ Rank ಬರುವ ವಿದ್ಯಾರ್ಥಿಗಳೆಂದು ಪರಿಗಣಿಸಿ ವಸತಿಯುತ 8 ದಿನಗಳ ಶಿಬಿರವನ್ನು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಏರ್ಪಡಿಸಿ ಮಾರ್ಗದರ್ಶನ ಮಾಡುವುದು. ಅಂತಿಮವಾಗಿ ಸ್ಕೋರಿಂಗ್ ಪ್ಯಾಕೇಜ್ ನೀಡಿ ಪ್ರೋತ್ಸಾಹಿಸುವುದು.

- **ಸಂಕಲ್ಪ ಶಿಬಿರ**:- ಇದೇ ಸಂದರ್ಭದಲ್ಲಿ ಮೇಲ್ಕಂಡ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆಯಾ ಪರೀಕ್ಷಾ ಕೇಂದ್ರದಲ್ಲಿ ವಸತಿ ರಹಿತ / ಸಹಿತ 8 ದಿನಗಳ ಶಿಬಿರವನ್ನು ಆಯೋಜಿಸಿ ತಾಲ್ಲೂಕು ಸಂಪನ್ಮೂಲ ಶಿಕ್ಷಕರನ್ನು ನಿಯೋಜಿಸಿ ತರಬೇತಿ ನೀಡುವುದು. ಅಂತಿಮವಾಗಿ ಪಾಸಿಂಗ್ ಪ್ಯಾಕೇಜ್ ನೀಡಿ ಪ್ರೋತ್ಸಾಹಿಸುವುದು.

- **ಸಂಜೀವಿನಿ ಶಿಬಿರ:**-ಜಿಲ್ಲೆಯ ಕೆಲವು ಆಯ್ದ ಶಾಲೆಗಳಲ್ಲಿ ಸಮಸ್ಯಾತ್ಮಕ ವಿದ್ಯಾರ್ಥಿಗಳನ್ನು (Problamatic child) ಗುರುತಿಸಿ ಅವರುಗಳಿಗೆ ಉತ್ತೀರ್ಣತೆಗೆ ಪ್ರೇರೇಪಿಸುವಂತೆ ವಸತಿಯುತ 10 ದಿನಗಳ ತರಬೇತಿಯನ್ನು ಆಯೋಜಿಸಿ ಪ್ರೋತ್ಸಾಹಿಸುವುದು.

13.**ವಿಷಯವಾರು ಕ್ಲಬ್‌ಗಳ ರಚನೆ:-** ಪ್ರತಿ ತಾಲ್ಲೂಕಿನಲ್ಲಿ ವಿಷಯವಾರು ಸಂಪನ್ಮೂಲ ಶಿಕ್ಷಕರ ತಂಡವನ್ನು ಸ್ಥಾಪಿಸಿ ವರ್ಷಕ್ಕೆ 4 ನಾಲ್ಕು ಬಾರಿ ವಿಷಯವಾರು ಕ್ಲಬ್‌ಗಳನ್ನು ರಚಿಸಿ ಪೂರ್ವಭಾವಿಯಾಗಿ ಕ್ರಿಯಾ ಯೋಜನೆ ರೂಪಿಸಿ (ಚರ್ಚಿಸಬೇಕಾದ ವಿಷಯವನ್ನು ಒಳಗೊಂಡಂತೆ) ಪರಸ್ಪರ ವಿನಿಮಯ

ಮಾಡಿಕೊಳ್ಳುವುದರೊಂದಿಗೆ ತಾಲ್ಲೂಕಿನಲ್ಲಿ / ಜಿಲ್ಲೆಯಲ್ಲಿ ಫಲಿತಾಂಶ ಸುಧಾರಣೆಯೊಂದಿಗೆ ಪ್ರೌಢ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಕ್ರಮ ಕೈಗೊಳ್ಳುವುದಾಗಿದೆ.

**14.ಪುನರಾವರ್ತನೆ ಪ್ಯಾಕೇಜ್ / ವಿಶೇಷ ಅಧ್ಯಯನ ತರಗತಿಗಳು:-**

ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷವನ್ನು ಪುಸ್ತಕ ಪರಿಚಯ ಅವಧಿಯೊಂದಿಗೆ ಪ್ರಾರಂಭಿಸಿ ಡಿಸೆಂಬರ್ ಅಂತ್ಯಕ್ಕೆ ಸಿಲಬಸ್ ಮುಕ್ತಾಯಗೊಳಿಸಿ ಪರೀಕ್ಷಾ ಪೂರಕ ಸಿದ್ಧತೆಗಾಗಿ ಪ್ರತಿ ದಿನ ವಿಶೇಷ ಅಧ್ಯಯನ ತರಗತಿಗಳನ್ನು / ಪುನರಾವರ್ತನೆ ಪ್ಯಾಕೇಜ್‌ಗಳನ್ನು ಕೆಳಕಂಡಂತೆ ಆಯೋಜಿಸಬಹುದಾಗಿದೆ.

**90 ದಿನಗಳ ಪ್ಯಾಕೇಜ್ –** ಕಲಿಕಾ ಪ್ರಗತಿಯನ್ನು ಆಧರಿಸಿ ಪ್ರತ್ಯೇಕ ಗುಂಪುಗಳಲ್ಲಿ ಬೋಧಿಸುವುದು (ಸಿಲಬಸ್ ಮುಕ್ತಾಯದ ನಂತರ).

**60 ದಿನಗಳ ಪ್ಯಾಕೇಜ್ –** ಕಲಿಕಾ ಪ್ರಗತಿಯನ್ನು ಆಧರಿಸಿ ಶಾಲಾ ಹಂತದಲ್ಲಿ ಶಿಬಿರಗಳ ನಿರ್ವಹಣೆ.

**30 ದಿನಗಳ ಪ್ಯಾಕೇಜ್ –** ಫಲಿತಾಂಶ ಮುಖಿ ತರಬೇತಿ ನಂತರ ಸ್ಕೋರಿಂಗ್ / ಪಾಸಿಂಗ್ ಪ್ಯಾಕೇಜ್ ಬೋಧನೆ. (ಸರಾಸರಿಗಿಂತ ಹೆಚ್ಚು ಮತ್ತು ಕಡಿಮೆ ಸಾಧಿಸಿದ ಗುಂಪುಗಳಿಗೆ)

**15.ಕಲಿಕೋತ್ಸವ:-** ಶಾಲಾ ಹಂತದಿಂದ ಜಿಲ್ಲಾ ಹಂತದವರೆಗೆ ಎಸ್.ಎಸ್. ಎಲ್. ಸಿ ಪಠ್ಯಾಧಾರಿತ, ಪರೀಕ್ಷಾ ಪೂರಕ ಫಲಿತಾಂಶ ಮುಖಿ ಶೈಕ್ಷಣಿಕ ಸ್ಪರ್ಧೆಗಳನ್ನು ಕೆಳಕಂಡಂತೆ ಆಯೋಜಿಸಿ / ಸಂಘಟಿಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು.

- ಸಮಗ್ರ ರಸ ಪ್ರಶ್ನೆ ಕಾರ್ಯಕ್ರಮ ಸ್ಪರ್ಧೆ
- ಆಶು ಭಾಷಣ ಸ್ಪರ್ಧೆ
- ಗಣಿತ / ಸಮಾಜ/ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ
- ವಿಷಯಾಧಾರಿತ ಪ್ರಾತ್ಯಕ್ಷಿಕೆ ಸ್ಪರ್ಧೆ

ಈ ಮೇಲ್ಕಂಡಂತೆ ಆಯ್ದ ಜಿಲ್ಲೆಗಳಿಂದ ನಮ್ಮ ಶಿಕ್ಷಕರುಗಳು ರಚನಾತ್ಮಕವಾಗಿ ಸಿ.ಸಿ.ಇ. ಚಟುವಟಿಕೆಗಳ ಯಶಸ್ವಿ ಅನುಷ್ಠಾನಕ್ಕಾಗಿ ವರ್ಷದ ಪ್ರಾರಂಭದಲ್ಲಿಯೇ ವಿಷಯವಾರು ಪಾಠಗಳನ್ನು ಆಧರಿಸಿ ಆಯಾ ತರಗತಿವಾರು ಚಟುವಟಿಕೆ (ಪ್ರಾಜೆಕ್ಟ್ ವರ್ಕ್ಸ್) ಗಳನ್ನು ಹಂಚಿಕೆ ಮಾಡಿ, ಅನುಸರಣೆ ಮಾಡಿ ಆಂತರಿಕ ಅಂಕಗಳನ್ನು ದಾಖಲಿಸಿಡುತ್ತಾರೆ. ಅಂತಹ ಕೆಲವು ಆವಿಷ್ಕೃತ ಚಟುವಟಿಕೆಗಳನ್ನು ದಾಖಲಿಸಿ ಮೇಲ್ಕಂಡಂತೆ ಸಲಹಾತ್ಮಕವಾಗಿ ನೀಡಿದ್ದು, ಶಾಲಾ ಹಂತದಲ್ಲಿ ಸದುಪಯೋಗ ಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಸಂತಸ ಕಲಿಕೆಗೆ ಪ್ರೋತ್ಸಾಹಿಸಲು ಕ್ರಮವಹಿಸುವುದು.